'ದ್ರೋಹಿ' ಎನ್ನುವಂತೆ. ನನಗೇನು ಅರ್ಥವಾಗಲೇ ಇಲ್ಲ. ಧೈರ್ಯವೇ ಬರಲಿಲ್ಲ. ಮಾರನೇ ದಿನ ನಮ್ಮ ಮನೆಯಲ್ಲೂ ಇದೇ ಚರ್ಚೆ – 'ಮನೇಲಿ ಬೆಳೆದ ಹೆಣ್ಣು ಮಗಳಿದ್ದಾಳೆ ಯಾರನ್ನು ನಂಬುವುದೋ ಏನೋ, ಒಂದು ಅರ್ಥವಾಗದು. ನೀವು ನಾಜೂಕಾಗಿ ಹೇಳಿಬಿಡಿ' ಅಮ್ಮ, ಅಪ್ಪನ ಬಳಿ ಹೇಳುತ್ತಿದ್ದಾಗ, 'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು' ಅಂತ ಹೇಳ್ತಾರೆ; ಹಾಗೆ ಒಬ್ಬರ ಊಟಕ್ಕೆ ಕಲ್ಲು ಹಾಕೋದು ಮಹಾ ಪಾಪ, ನನಗಿಷ್ಟವಿಲ್ಲ' ಎಂದು ಅಪ್ಪ ಕಡ್ಡಿ ತುಂಡು ಮಾಡಿದವರಂತೆ ಹೇಳಿದ್ದರು. 'ಜಗ್ಗು ನೀನು ಚಿಕ್ಕವನಲ್ಲ, ನಿಮ್ಮ ಅಕ್ಕನಿಗೆ ಹೀಗಾದರೆ ಸುಮ್ಮನೆ ಇರ್ತಿದ್ಯಾ? ಹೇಳು ನಿಮ್ಮಪ್ಪಂಗೆ.' ನಾನು ತುಟಿ ಬಿಚ್ಚಿರಲಿಲ್ಲ, ಏನೋ ಹೆದರಿಕೆ. ಸದ್ಯ ಅಕ್ಕ ಸೇಫ್ ಆದರೆ ಸಾಕು ಎಂಬ ಸ್ವಾರ್ಥ ಮುಂದಿನ ಭಾನುವಾರ ಊಟಕ್ಕೆ ಕುಳಿತಾಗ ಅಮ್ಮನ ತಾತ್ಸಾರ ಹೊಗೆಯಾಡುತ್ತಿತ್ತು. ಅದನ್ನು ಗ್ರಹಿಸದಷ್ಟು ದಡ್ಡನಲ್ಲ ಕಲ್ಯಾಣಿ. 'ನೀನು ಮಾಡಿದ್ದೂ ಸರಿಯಲ್ಲಮ್ಮ' ಎಂದು ಹೇಳುವ ಧೈರ್ಯವಿಲ್ಲದೇ ತೆಪ್ಪಗಾಗಿದ್ದೆ. ತಿಂಗಳೊಳಗೆ ಮೂರು ಮನೆಯಿಂದ ವಾರಾನ್ನದ ಅವಕಾಶಕ್ಕೆ ಕತ್ತರಿ. ಆಮೇಲೇನಾಯಿತೋ ಏನೋ ಕಲ್ಯಾಣಿ ನಮ್ಮ ಬಡಾವಣೆಯಲ್ಲೇ ಕಂಡಿರಲಿಲ್ಲ. ಮನಸ್ಸು ಮಾಡಿದ್ದರೆ ನಮ್ಮ ಮನೆಯಲ್ಲಿ ಆಗಿದ್ದ ಅವಮಾನವನ್ನು ತಡೆಯಬಹುದಿತ್ತು. ನನ್ನ ಅಂತರಾತ್ಮ ನನ್ನ ತಪ್ಪನ್ನು ನೆನಪಿಸುತ್ತಲೇ ಇತ್ತು. ಎಷ್ಟು ನಿಷ್ಕಲ್ಮಷವಾಗಿ ನನ್ನೊಂದಿಗೂ ಮಾತನಾಡಿದ್ದರು ಯಾವುದೇ ಪಾಪಪ್ರಜ್ಞೆ ಇಲ್ಲದೆ. ನಾನು ಚಾಡಿ ಹೇಳಬಾರದಿತ್ತು. ನಾನು ಎಂತಹ ದೊಡ್ಡ ತಪ್ಪು ಮಾಡಿದ್ದೆ; ಪೂರ್ವಾಪರ ನೋಡದೆ ವಸಂತ–ಕಲ್ಯಾಣಿ ಬಗ್ಗೆ ಅವರ ಮನೆಯಲ್ಲಿ ಹೇಳುವುದು ಬೇಕಿರಲಿಲ್ಲ. ವಸಂತಕ್ಕನನ್ನು ಮಾತನಾಡಿಸುವ ಧೈರ್ಯವೂ ಇರಲಿಲ್ಲ.

ಎಸ್ಸೆಸ್ಸೆಲ್ಸಿಯಲ್ಲಿ ನಾನು ಎರಡನೇ ದರ್ಜೆಯಲ್ಲಿ ಉತ್ತೀರ್ಣನಾಗಿದ್ದೆ. ಗುರುಗಳಿಗೆಲ್ಲ ಹಂಚಲು ಸಿಹಿ ಜೊತೆಗೊಂದು ಆಟೋಗ್ರಾಫ್ ಬುಕ್ ಹೊತ್ತು ಸಂಭ್ರಮದಿಂದ ನಡೆದಿದ್ದೆ. ಎಲ್ಲರಿಗೂ ಸಿಹಿ ಹಂಚಿ ಆಟೋಗ್ರಾಫ್ ಹಾಕಿಸಿಕೊಂಡು, ಪ್ರೈಮರಿ ವಿಭಾಗದಲ್ಲಿ ವಸಂತನ ಕ್ಲಾಸಿಗೂ ಸಿಹಿಯೊಡನೆ ಗೆಳೆಯರ ಗುಂಪನ್ನು ಹಿಂಬಾಲಿಸಿದ್ದೆ. ಸಿಹಿ ತೆಗೆದುಕೊಂಡು ವಸಂತ ತನ್ನ ಅನಿಸಿಕೆಯನ್ನು ದಾಖಲಿಸಿದ್ದಳು – 'ನೀತಿಯೆಂದರೆ ನೇರ ನುಡಿಯೇ ಹೊರತು ಕುಟಿಲತೆ ಅಲ್ಲ'. ಓದಿದೊಡನೆ ಮುಖಕ್ಕೆ ರಾಚಿದಂತಾಯ್ತು. ನನ್ನ ಕಾರಣದಿಂದಾಗಿ ಒಬ್ಬನ ಹೊಟ್ಟೆಗೆ ಹೊಡೆದಿದ್ದೆ, ಮತ್ತೋರ್ವಳ ಘನತೆಗೆ ಪೆಟ್ಟು ಕೊಟ್ಟಿದ್ದೆ. ಅನ್ಯಾಯವಾಗಿ ತಪ್ಪೆಸಗದ ಎರಡು ಜೀವಗಳಿಗೆ ನೋವು ಕೊಟ್ಟಿದ್ದೆ. ಒಂದು ರೀತಿ ಕಲ್ಯಾಣಿ ನನಗೆ ವಿದ್ಯೆ ಕಲಿಸಿದ ಗುರು. ಅವನ ಸಹಾಯವಿಲ್ಲದಿದ್ದರೆ ಅದೆಷ್ಟು ಅವಕಾಶಗಳನ್ನು ತೆಗೆದುಕೊಳ್ಳುತ್ತಿದ್ದೆನೋ ಹತ್ತನೆಯ ತರಗತಿಯನ್ನು ದಾಟಲು. ಆ ಕಾಲಕ್ಕೆ ಎರಡನೇ ದರ್ಜೆ ಕಳಪೆಯೇನಲ್ಲ. ನಾನು ಬಯಸಿದ ಕಲಾ ವಿಭಾಗಕ್ಕೆ

